ಮಾಸ್ತಮ್ಮ ಮಡಿಲಿನಲ್ಲಿ ಕಟ್ಟಿಕೊಂಡಿದ್ದ ರಾಗಿಯನ್ನು ಎರಡೂ ಕೈಲಿ ಹಿಡಿದುಕೊಂಡು ಕಳ್ಳೆಬೇಲಿಯ ಮರೆಯಲ್ಲೇ ಕುದುರೆಮನೆ ಮುನಿಯಪ್ಪನವರ ದೊಡ್ಡ ಬಾವಿ ಹತ್ತಿರ ಬಂದಳು. ಕಪ್ಪಗಿದ್ದ ಬಾವಿಯ ನೀರಿನಲ್ಲಿ ಕತ್ತಲೆ ತನ್ನನ್ನು ಸಂಪೂರ್ಣವಾಗಿ ತೋಯಿಸಿಕೊಂಡಿತ್ತು. ಅವಳ ಕಾಲುಗಳು ಮುಂದಕ್ಕೆ ಸಾಗಲಿಲ್ಲ. ರೂಢಿಯಂತೆ ಅವಳ ಕಣ್ಣುಗಳು ಬಾವಿಯ ಕಡೆ ಹೊರಳಿದವು. ಆ ನೋಟದಲ್ಲಿ ನೋವಿತ್ತು. ಅವಳು ನೋಡಿದಷ್ಟೂ ಬಾವಿಯ ನೀರು ಕೆಳಗಿಳಿಯುತ್ತಿತ್ತು. ಬಾವಿಯ ಆಳದಿಂದ ಒಂದು ಕರೆ:

'ಮಾಸ್ತೀ!...'

ಅದು ಅವಳಿಗೆ ಪರಿಚಿತವಾಗಿದ್ದ ತನ್ನ ಗಂಡ ಚಿಕ್ಕರಾಮನ ಧ್ವನಿ. ಅವನಲ್ಲದೆ ಮತ್ಯಾರು ಅವಳನ್ನು ಹೀಗೆ ಕರೆಯುವವರು? ಆ ಧ್ವನಿ ಕಿವಿಗೆ ಬಿದ್ದೊಡನೆಯೇ ಅವಳು ಕಂಪಿಸತೊಡಗಿದಳು. ಬಾವಿಯೊಳಗಿದ್ದ ಕಪ್ಪುನೀರನ್ನು ಬಗೆಮಾಡಿಕೊಂಡು ಹಸಿ ಹಸಿಯಾದ ರಕ್ತ ಉಗ್ಗತೊಡಗಿತು. ಬಾವಿಯ ತುಂಬೆಲ್ಲಾ ರಕ್ತ. ನೋಡುತ್ತಿದ್ದಂತೇ ಆ ರಕ್ತ ಬಾವಿಯ ದಡವನ್ನೂ ದಾಟಿ ಉಕ್ಕಿ ಹರಿಯತೊಡಗಿತು. ಅದು ನನ್ನ ಗಂಡ ಚಿಕ್ಕರಾಮನ ದೇಹದೊಳಗಿನಿಂದ ಹರಿದ ರಕ್ತ. ಇದು ಊರಿನವರೆಲ್ಲಾ ಸೇರಿ ಮಾಡಿದ ಹಗಲುಕೊಲೆ ಎನಿಸಿತು ಅವಳಿಗೆ. ಅವಳು ಮತ್ತು ಅವಳ ಹಟ್ಟಿಯವರು 'ಊರ್ರೈಲಡ್ಡಿ ಸೇರ್ಗೊಂಡು ಚಿಕ್ಕರಾಮನ್ನ ಪಟ್ ಪಗಮಾರ್ಲಿ ಕೊಂಡ್ರೊಡ್ಸ್' (ಊರಿನವರೆಲ್ಲಾ ಸೇರಿ ನಮ್ಮ ಚಿಕ್ಕರಾಮನನ್ನು ಹಾಡಹಗಲೇ ಕೊಲೆಮಾಡಿದರು) ಎಂದು ಪೊಲೀಸರ ಮುಂದೆ ಬಂಡೆಗಳು ಕರಗುವಂತೆ ಹೇಳಿದರು. ಆದರೆ ಪೊಲೀಸರ ಹೃದಯ ಮಾತ್ರ ಹಟ್ಟಿಯವರ ಮಾತುಗಳಿಗೆ ಕರಗಲಿಲ್ಲ! ತನ್ನ ಗಂಡನ ಕೊಲೆಗೆ ಊರಿನವರೊಂದಿಗೆ ಪೊಲೀಸರೂ ಶರೀಕಾಗಿದ್ದರೆಂದು ಅವಳ ಮನಸ್ಸು ಒತ್ತಿ ಹೇಳುತ್ತಿತ್ತು.

'ನಂಬ್ರು ಇಕ್ಕೆರ್ ಇರುವ ತಕೋರ್ರೆ ಮಣ್ಣಾಗಬೇಕು; ಇಲ್ಲ ತನ್ಯಾಗಿ ಹರಿಬೇಕು. ಅಪ್ಪೋ ಮಾತ್ರ ಸಾರ್ಥಕ...' (ನಾವು ಇರೋ ತಾವಿನಲ್ಲೇ ನಮ್ಮ ದೇಹ ಮಣ್ಣಾಗಬೇಕು, ಇಲ್ಲಾ ನೀರಾಗಿ ಹರಿಬೇಕು. ಆಗ ಮಾತ್ರ ಸಾರ್ಥಕ) ತನ್ನ ಅಜ್ಜಿ ಕ್ಯಾಸಕ್ಕ ಯಾವಾಗಲೋ ಹಿಂದೆ ಹೇಳಿದ್ದ ಮಾತುಗಳು ನಿಜವಾಗಿತ್ತು. ಚಿಕ್ಕರಾಮನ ದೇಹ ನೀರೊಳಗೆ ನೀರಾಯಿತು. ಮಾಸ್ತಮ್ಮನ ಕಣ್ಣೀರು ನಿಧಾನವಾಗಿ ಆಳದ ಬಾವಿಗಿಳಿದು ಕೆನ್ನೀರಿನೊಂದಿಗೆ ಒಂದುಗೂಡಿತು.

ಗಾಳಿಗೆ ಎತ್ತೆತ್ತಲೋ ಹಾರಾಡುತ್ತಿದ್ದ ಸೆರಗನ್ನು ತಲೆಮೇಲೆ ಹೊದ್ದು ಹಟ್ಟಿಯ ಕಡೆ ಹೆಜ್ಜೆ ಹಾಕಿದಳು.

★★★

ತನ್ನ ಗಂಡ ಚಿಕ್ಕರಾಮ ಸಹೊರ್ತ್ತಿನಲ್ಲಿ ಬಂದು ಹಟ್ಟಿಯ ಮುಂದೆ ನಿಂತ ತನ್ನನ್ನು ಹೀಗೆಯೇ:

'ಮಾಸ್ತೀ!...'

ಎಂದು ಕರೆಯುತ್ತಿದ್ದ. ಅವನು ಹೀಗೆ ಕರೆದಾಗಲೆಲ್ಲಾ ಯಾವುದಾದರೂ ಹಟ್ಟಿಗೋ ಅಥವಾ ತೋಟಕ್ಕೋ ನುಗ್ಗಿ ಏನಾದರೂ ಬ್ಯಾಟೆ ತಂದಿದ್ದಾನೆಂದೇ ಅರ್ಥ. ಅವನು ಎಂದೂ ಬರಿಗೈಲಿ ಬಂದವನಲ್ಲ! ಬಗಲಲ್ಲಿ ರಾಗಿ ಚೀಲ ಜೊತೆಯಲ್ಲಿ ಗೋಣು ಮುರಿದಿದ್ದ ಕದ್ದ ಕೋಳಿಯನ್ನು ವಲ್ಲಿಯಲ್ಲಿ ಮರೆಮಾಡಿಕೊಂಡು ಬಂದು ನಿಲ್ಲುತ್ತಿದ್ದ.

'ಮಾಸ್ತೀ... ಕಾರ ಯರಿ ತಿರ್ಗಿ...' (ಮಾಸ್ತಿ, ಕಾರ ಅರಿ ಮತ್ತೆ)

ಎಂದು ನನ್ನನ್ನು ಪುಸುಲಾಯಿಸುತ್ತಿದ್ದ. ಹಟ್ಟಿಯ ಮುಂದೆ ಕುಳಿತು, ಕೋರೆಜೋಬಿನಿಂದ ನಿಧಾನವಾಗಿ ಸಾರಾಯಿ ಹೊರತಗೆದು ದೊಡ್ಡ ಆಕಾಶವನ್ನು ತನ್ನ ಚಿಕ್ಕ ಕಣ್ಣುಗಳಿಂದ ತುಂಬಿಕೊಳ್ಳುತ್ತಿದ್ದ. ಸಾರಾಯಿ ಹೊಟ್ಟೆಗೆ ಬೀಳುತ್ತಿದ್ದಂತೆ, ನಡುನಡುವೆ ಬಿಮನ್ಸೆಯಾಗಿದ್ದ ನನ್ನನ್ನು